		4. Any area set apart for forest reserve under Section 71 of the Karnataka Land Revenue Act. 1964.
		5. Any area reserved and transferred to the forest department under the provisions in sub-section (3) of section 77 of the Karnataka Land Reforms Act, 1961
		5. All the land parcels notified in the Official Gazette under the provision of section 4 of the relevant Forest Act, which are in the process of Forest settlement for the final notification as 'Reserved Forest' under section (17) of Karnataka Forest Act. 1963.
4.	Private Forests	i) As per section 36 in the Karnataka Forest Act 1963. any land containing trees and shrubs. pasture lands and any land whatsoever which the state government may. by notification under this section. declare to be a forest, is a private forest.
		ii) As per section 39 in the Karnataka Forest Act. 1963. any land notified by the state Government under this section for the protection of forest for special purposes is a private forest.

. **b) Areas recorded as 'forests' in the Government records:** All the land parcels that are recorded as forest. aranya, kadu, marakadu. jungle etc., (i) in the land records (RTC Pahani etc.) maintained under the provisions of the Karnataka Land Revenue Act. 1964 (Act No. 12 of 1964) and allied statutes till 30lh June 1981: (ii). All classes of lands in the survey settlement records prepared during the process of land revenue settlement: (iii). Forest Working Plans: (iv). District Census Handbooks of all the

districts in the State of Karnataka; (v) All classes of lands designated as forests in the Karnataka Revenue Survey Manual, could be defined as "forest" for the purpose of the Forest (Conservation) Act 1980.

c) 'Forests' as understood in the dictionary sense:

The following field criteria is approved by the Government for determining the 'Forests' as understood in the dictionary sense (i) All Government land parcels (excluding those which are "statutory forests" and 'forests as per Government records"), of an area of two hectares and above having at least a density of 50 naturally grown trees per hectare, of gbh of 30 cm and above (OR) All plantations on Government land of an area of 2 Ha and above (excluding those which are "statutory forests" and 'forests as per Government records") with a minimum density of 100 planted trees/ Ha of gbh of 30 cm and above.(gbh is girth of tree at breast height measured at a height of 4.5 feet from ground)

d) Plantations of any kind on private lands shall not be considered as 'forests'. Private lands with naturally grown trees, with 50 trees per hectare of gbh 30 cm and above, on an extent or 5 Ha and above shall only be treated as "private forests".

12. After exclusion of all the above 'forests', the remaining areas out of the lands at the disposal of Govt., as per the definition of "District Forests" under Section 2(2) of the Karnataka Forest Act, 1963 can be excluded from the purview of Forest Conservation Act, 1980 after seeking necessary orders from Apex Court by filing an Affidavit/Interlocutory Application in the Court in WP(Civil) 202/1995 with proper justification for such exclusion. The lands so excluded shall be reserved for public purpose like Health, Education, Irrigation, Social Welfare, Rural Housing and essential Rural Infrastructure.

Now, the Government of Karnataka examined all the aspects in the light of the above facts and decided to issue the following order :-

GOVERNMENT ORDER NO: FEE 185 FAF 2011 BANGALORE, DATED: 15-05-2014

After careful examination all the aspects and to ensure compliance of the order of the Supreme Court dated 12/02/1996 the Government constitutes the following committees:

The Committees will verify/review the areas included as 'Deemed Forests' in the report of Revised Expert Committee-I. The total extent of deemed forests should be categorised into a) statutory forests b) recorded as "forests' in Government records c) areas Which are 'forests' as per dictionary definition based on field verification as per the criteria and methodology approved at Para (11) or Preamble. The Committees will also consider those area not included in the Revised Expert Committee report as deemed forest. but eligible for inclusion based on Government records or approved field criteria.

(A) District Level Committee:

a) Deputy Commissioners of the District.
b) Deputy Conservator of Forests (territorial) at District Headquarter – Convenor.
c) Deputy Conservator of Forests (territorial) / Wildlife, where the district has two or more divisions.
d) Deputy Directors of Land Records concerned.

(B) Revenue Divisional Level Committee:

a) Regional Commissioner of the Revenue Division.
b) Chief Conservator of Forests of the Forest Circle stationed at Revenue Divisional Headquarters–Convenor.
c) Chief Conservator of Forests of the Territorial Circles in the Revenue Division.
d) Joint Directors of Land Records

(C) State Level Committee:

a) Additional Chief Secretary to Government. Forest. Ecology and Environment Department.
b) Principal Secretary/Secretary to Government, Revenue Department
c) Principal Chief Conservator of Forests (HOFF).
d) Commissioner for Survey Settlement and Land Records.
e) Additional Principal Chief Conservator of Forests, Working Plans-Convenor

1) The District Committees will organise field tearms for applying the approved field criteria to arrive at forest areas as per Dictionary definition. These field teams shall visit the areas listed by Revised Expert Committee as 'Deemed Forests', as well as areas left out by Revised Expert Committee, but otherwise fit to be a "forest" as per the field criteria or as per the entries in Government records. The District Committees may meet as many times as required, but a monthly review is mandatory, as the task assigned herein should be completed in a **six months.**

2) The state level committee will review the progress and issue further guideliens/clarifications as deemed necessary for proper conduct of the review.

3) The Regional Committee will review. monthly, the progress of the District teams.

4) Principal Chief Conservator of Forests (HOFF) should ensure that non of the statutorily notified forests such as Reserved Forests, Protected Forests. Village Forests, areas notified under Sec(4) of Karnataka Forest Act.1963, overlap with the forest area to be finalised now under the categories of forest by dictionary definition (by applying field criteria) and forests as per Government Records. Necessary instructions be issued to the field officers in the matter.

5) During the pendency of the review, if any area is required for public purpose such as health, education, social welfare, irrigation and other essential rural infrastructure out of the Government lands (excluding statutory 'forests' and forests as per Govt., records), the pre-determined 'field criteria" as in para II approved will be applied to decide whether the proposed area falls under 'forest or otherwise.

6) On completion of the review. the reports shall be placed before the Cabinet for consideration and after approval by the Cabinet an Affidavit will be filed before the Honble Supreme Court, accordingly.

By ORDER AND IN THE NAME OF THE GOVERNOR OF KARNATAKA.

S.P. PATIL
UNDER SECRETARY TO GOVERNMENT,
FOREST, ECOLOGY AND ENVIRONMENT DEPARTMENT.

Annexure

Forest areas as per the report of Revised Expert Committee - I

SL No.	Catetories of Forests	Total Area (ha)
1	**2**	**3**
I	**NOTIFIED FORESTS**	
I A	**Reserved Forests**	
1	Declared under Section 17 of KFA	17,62,919.76
2	Section 17 of Mysore Forest Regulation	5,94,778.32
3	Section 20 of IFA	2,94,493.94
4	Section 16 of Madras FA	2,58,781.95
5	Section 19 of Hyderabad FA	44,048.40
	Sub Total	29,55,022.37
1B	**Protected Forests /Minor Forests** (Section-33 & Section -35)	
1	Declared under Section 4 of KFA	1,78,673.47
2	Protected Forests	1,69,512.43
3	Devara Kadu	2,956.67
4	Urudve	2,733.80
5	Others -Sandal-Teak reserves etc.	4,644.66
	Sub Total	**3,58.521.03**
IC	**Village Forests** Section -29	4,904.76
ID	**Private Forest** Section -36	5,406.82
	Total Notified Forests	**33,23 854.98**
II	**DEEMED FORESTS**	
IIA	**District Forests**	
1	Proposed for Section 4 of KFA	1,21,716.01
2	Betta land	7,652.43
3	Bane	79.,957.41
4	Jamamalai	4,953.28

SL No.	Catetories of Forests	Total Area (ha)
1	2	3
5	Forest porampoke	3,981.35
6	Forest Paisari land	44,051.23
7	Kans	20,218.25
8	Kumki	37,703.90
9	Amrith Mahal Kaval	30,112.30
10	Assessed waste lands	35,850.80
11	Kharab	7,447.26
12	Submerged lands	-
	i) Mangrooves	998.80
	ii) Wet lands -	-
	iii) Others	20,795.04
13	River catchment & Sea erosion area	583.14
14	Land classified as Forest / Jungle in Revenue records	10,393.34
15	Forest Inam land	3,569.62
16	Gomal lands where plantations have been raised	41,160.84
17	Thickly wooded areas (of revenue department not handed over to KFA)	1,01,184.94
18	C & D without any plantation but with KFD	3,07,859.87
19	Thickly wooded area noted as Forest in Revenue records and recommended to be taken over by the KFD	16,908.38
20	Thickly wooded lands distributed but not cultivated no tree felled	116.31
21	Water bodies -	
	i) Lakes	-
	ii) Tanks	3,326.25
22	Plantations -	
	i) Strip	415.80
	ii) Roadside	15,770:01
	iii) Canal bank	772.90
	iv) Foreshore	10,314.19
	v) School	3,187.53
	vi) Community land	11,498.04
	vii) Plantations raised by institutions	2,297.30
	viii) Other plantations	55,265.02
23	Others	11,778.28
	Total Deemed Forests	**10,11,839.82**
	Grand Total(ha)	**43,35,694.80**

Total Deemed Forests			10,11,839.82
Deductions			
Strip	-	415.80	16,958.71
Road side	-	15,770.01	
Canal bank	-	772.90	
		Total (ha)	**9,94,881.11**

S.P. PATIL
Under Secretary to Government
Forest, Ecology and Environment Department

P.R. 419
SC - 250

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಕೃತ ಜ್ಞಾಪನ

ಸಂಖ್ಯೆ:ಸಿಆಸುಇ 33 ಹೈಕಲು 2014, ಬೆಂಗಳೂರು ದಿನಾಂಕ: 10-04-2014

ವಿಷಯ: ಭಾರತ ಸಂವಿಧಾನದ 371(ಜೆ) ಅನುಚ್ಛೇದವನ್ನು ಅನುಷ್ಠಾನಗೊಳಿಸುವಾಗ ಸ್ಥಳೀಯ ವೃಂದವನ್ನು ರಚಿಸಿ, ಸ್ಥಳೀಯ ವ್ಯಕ್ತಿಗಳನ್ನು ಸ್ಥಳೀಯ ವೃಂದಕ್ಕೆ ಹಂಚಿಕೆಮಾಡಿ, ಆ ವೃಂದಕ್ಕೆ ವರ್ಗಾವಣೆ ಮಾಡಿದ ನಂತರ ರೋಸ್ಟರ್ ಬಿಂದುಗಳನ್ನು ಸರಿದೂಗಿಸಿ, ರೋಸ್ಟರ್‌ನ್ನು ಚಾಲನೆಗೊಳಿಸುವ ಕುರಿತು.

2013ರ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶವು ಸ್ಥಳೀಯ ವೃಂದದ ರಚನೆಗೆ ಮತ್ತು ವ್ಯಕ್ತಿಗಳನ್ನು ಮಾತೃ ವೃಂದದಿಂದ ಸ್ಥಳೀಯ ವೃಂದಕ್ಕೆ ಹಂಚಿಕೆಮಾಡಿ, ವರ್ಗಾಯಿಸುವುದಕ್ಕೆ ಉಪಬಂಧ ಕಲ್ಪಿಸುತ್ತದೆ. ಈ ಸಂಬಂಧವಾಗಿ ಅನುಸರಿಸಬೇಕಾದ ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದದ ರಚನೆ, ವ್ಯಕ್ತಿಗಳ ಹಂಚಿಕೆ ಮತ್ತು ವರ್ಗಾವಣೆ) ನಿಯಮಗಳು, 2013ರಲ್ಲಿ ವಿವರವಾದ ಕಾರ್ಯನಿರ್ವಹಣಾ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಸ್ಥಳೀಯ ವೃಂದವನ್ನು ರಚಿಸಿದ ತರುವಾಯ, ನೇಮಕಾತಿ/ ವೃಂದ ನಿಯಂತ್ರಣಾ ಪ್ರಾಧಿಕಾರಗಳು ಮಾತೃ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಪೈಕಿಯಿಂದ ಸ್ಥಳೀಯ ವ್ಯಕ್ತಿಗಳನ್ನು ಗುರುತಿಸುವುದು ಅಗತ್ಯವಾಗಿದೆ. ಹಾಗೆ ಮಾಡುವಾಗ, ಸ್ಥಳೀಯ ಪ್ರದೇಶದ ವ್ಯಾಪ್ತಿಯೊಳಗೆ ಬರುವ ಅವರ ಹುಟ್ಟೂರು ಅಥವಾ ಜನ್ಮಸ್ಥಳದ ಬಗ್ಗೆ ದಿನಾಂಕ: 01-01-2013ಕ್ಕೂ ಮುಂಚೆ ಸೇವಾ ಪುಸ್ತಕದಲ್ಲಿ ಮಾಡಲಾದ ನಮೂದನ್ನು ಅವರ ಅಧಿವಾಸದ (Domicile) ನಿರ್ಣಾಯಕ ಪುರಾವೆ ಎಂದು ಪರಿಗಣಿಸತಕ್ಕದ್ದು. ಸ್ಥಳೀಯ ವ್ಯಕ್ತಿಗಳೆಂದು ವರ್ಗೀಕರಿಸಲು ಅರ್ಹರಾದಂಥ ವ್ಯಕ್ತಿಗಳಿಗೆ ಸ್ಥಳೀಯ ವೃಂದಕ್ಕೆ ಹಂಚಿಕೆಗೊಳ್ಳುವುದಕ್ಕಾಗಿ ಆಯ್ಕೆ ಮಾಡಿಕೊಳ್ಳಲು ಒಂದು ಅವಕಾಶವನ್ನು ನೀಡತಕ್ಕದ್ದು ಮತ್ತು ಸ್ಥಳೀಯ ವೃಂದಕ್ಕೆ ಸೇರಲು ಆಯ್ಕೆ ಮಾಡಿಕೊಳ್ಳುವ ನೌಕರರ ಧಾರಣಾಧಿಕಾರವನ್ನು (lien) ಸ್ಥಳೀಯ ವೃಂದದಲ್ಲಿ ನಿಗದಿಪಡಿಸತಕ್ಕದ್ದು ಮತ್ತು ಅಂತೆಯೇ, ಅವರ ಜೇಷ್ಠತೆ ಹಾಗೂ ರೋಸ್ಟರ್ ಬಿಂದುಗಳ ಸಮೇತ ಅವರನ್ನು ಸ್ಥಳೀಯ ವೃಂದಕ್ಕೆ ವರ್ಗಾಯಿಸತಕ್ಕದ್ದು. ಇದು ತಂತಾನೇ ಸ್ಥಳೀಯ ಮತ್ತು ಉಳಿಕೆ ಮಾತೃ ವೃಂದಗಳೆರಡರಲ್ಲೂ ಮೀಸಲಾತಿಯಲ್ಲಿನ ಅಸಮತೋಲನಕ್ಕೆ ದಾರಿ ಮಾಡಿಕೊಡಲಿದೆ. ಸ್ಥಳೀಯ ವೃಂದದಲ್ಲಿನ ರೋಸ್ಟರ್ ಬಿಂದುಗಳಲ್ಲಿ ಕೊಂಚಮಟ್ಟಿನ ಪ್ರಾತಿನಿಧ್ಯವಿರುವಂತೆಯೇ, ಉಳಿಕೆ ಮಾತೃ ವೃಂದಗಳಲ್ಲಿನ ರೋಸ್ಟರ್ ಬಿಂದುಗಳಲ್ಲಿ ಸಹ ಕೊಂಚಮಟ್ಟಿನ ಪ್ರಾತಿನಿಧ್ಯವಿರುತ್ತದೆ. ಆದ್ದರಿಂದ, ಎರಡೂ ವೃಂದಗಳಲ್ಲಿ ನೇರ ನೇಮಕಾತಿಯ ಮೂಲಕವಾಗಲಿ ಅಥವಾ ಬಡ್ತಿಯ ಮೂಲಕವಾಗಲಿ ಖಾಲಿ ಹುದ್ದೆಗಳನ್ನು ಭರ್ತಿಮಾಡಿಕೊಳ್ಳುವ ತಕ್ಷಣದ ಪ್ರಕ್ರಿಯೆಯಲ್ಲಿ ರೋಸ್ಟರ್ ಬಿಂದುಗಳನ್ನು ಸರಿದೂಗಿಸುವ ತುರ್ತು ಅಗತ್ಯವಿದೆ. ಸ್ಥಳೀಯ ವೃಂದ ಮತ್ತು ಉಳಿಕೆ ಮಾತೃ ವೃಂದಗಳನ್ನು ನೇರ ನೇಮಕಾತಿ, ಬಡ್ತಿ, ಜೇಷ್ಠತೆ ಮತ್ತು ರೋಸ್ಟರ್ ಬಿಂದುಗಳನ್ನು ಚಾಲನೆಗೊಳಿಸುವ ಉದ್ದೇಶಕ್ಕಾಗಿ ಎರಡು ಪ್ರತ್ಯೇಕ ಘಟಕಗಳೆಂಬುದಾಗಿ ಪರಿಗಣಿಸಬೇಕೆಂಬ ಸಂಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದರೆ ಎರಡೂ ವೃಂದಗಳಲ್ಲಿ ಮೊದಲ ರೋಸ್ಟರ್ ಬಿಂದುವಿನಿಂದ ಪ್ರಾರಂಭಿಸಿ ರೋಸ್ಟರ್ ಚಕ್ರವನ್ನು ಪ್ರಾರಂಭಿಸಬೇಕೇ ಅಥವಾ ಬೇರೆ ಯಾವುದಾದರೂ ರೋಸ್ಟರ್ ಬಿಂದುವಿನಿಂದ ಪ್ರಾರಂಭಿಸಿ ರೋಸ್ಟರ್ ಚಕ್ರವನ್ನು ಪ್ರಾರಂಭಿಸಬೇಕೇ ಎಂಬ ಬಗ್ಗೆ ಪ್ರಶ್ನೆ ಉದ್ಭವವಾಗುತ್ತದೆ. ನೌಕರರ ಪೈಕಿಯಿಂದ ಸ್ಥಳೀಯ ವೃಂದದ ಆಯ್ಕೆ ಕೋರುವ ಸ್ಥಳೀಯ ವ್ಯಕ್ತಿಗಳಿಗೆ ಸ್ಥಳೀಯ ವೃಂದವನ್ನು ಹಂಚಿಕೆ ಮಾಡಿದ ತರುವಾಯ ರೋಸ್ಟರ್ ಬಿಂದುಗಳಲ್ಲಿ ಕೊಂಚಮಟ್ಟಿಗೆ ಪ್ರಾತಿನಿಧ್ಯವಿರುತ್ತದೆ ಎಂಬ ಸಂಗತಿಯ ಹಿನ್ನೆಲೆಯಲ್ಲಿ, ಮೊದಲನೇ ಬಿಂದುವಿನಿಂದ ಪ್ರಾರಂಭಿಸಿ ರೋಸ್ಟರ್‌ನ್ನು ಚಾಲನೆಗೊಳಿಸಿದರೆ, ಕೆಲ ರೋಸ್ಟರ್ ಬಿಂದುಗಳ ಪುನರಾವರ್ತನೆಯಾಗಲಿದ್ದು, ಇದರಿಂದ ಅತಿಯಾದ ಪ್ರಾತಿನಿಧ್ಯಕ್ಕೆ ದಾರಿ ಮಾಡಿಕೊಡಲಿದೆ. ಹೀಗಾಗಿ, ರೋಸ್ಟರ್‌ನ್ನು ನಿರಂತರವಾಗಿ ಚಾಲನೆಗೊಳಿಸುವುದಕ್ಕೂ ಮುಂಚೆ ರೋಸ್ಟರ್‌ನ್ನು ಸಮತೋಲನಗೊಳಿಸುವುದು ಅತ್ಯವಶ್ಯಕವಾಗಿದೆ. ಮೊದಲ ಬಿಂದುವಿನಿಂದ ಪ್ರಾರಂಭಿಸಿ ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಲಾದ ಕಡೆಯ ನೌಕರನ ರೋಸ್ಟರ್ ಬಿಂದುವಿನವರೆಗೆ ರೋಸ್ಟರ್ ಚಕ್ರದಲ್ಲಿ ಬರುವ ಕೈಬಿಟ್ಟುಹೋದ ರೋಸ್ಟರ್ ಬಿಂದುಗಳನ್ನು ಗುರುತಿಸಬೇಕು ಮತ್ತು ನೇಮಕಾತಿ ಪ್ರಾಧಿಕಾರಗಳು ನೇರ ನೇಮಕಾತಿಯ ಮೂಲಕವಾಗಲಿ ಅಥವಾ ಬಡ್ತಿಯ ಮೂಲಕವಾಗಲಿ ಖಾಲಿ ಹುದ್ದೆಗಳನ್ನು ತುಂಬಿಕೊಳ್ಳುವ ತಮ್ಮ ತಕ್ಷಣದ ಪ್ರಯತ್ನದಲ್ಲಿ ಅದೇ ಆದ್ಯತೆಯ ಮೇಲೆ ಅಂಥ ಕೈಬಿಟ್ಟುಹೋದ ರೋಸ್ಟರ್ ಬಿಂದುಗಳನ್ನು ಭರ್ತಿಮಾಡಿಕೊಳ್ಳಲು ಕ್ರಮ ಕೈಗೊಳ್ಳಬೇಕು. ಕೈಬಿಟ್ಟುಹೋದ ರೋಸ್ಟರ್ ಬಿಂದುಗಳನ್ನು ಗುರುತಿಸುವಾಗ, ನೇಮಕಾತಿ/ ವೃಂದ ನಿಯಂತ್ರಣಾ ಪ್ರಾಧಿಕಾರಗಳು ನೇರ ನೇಮಕಾತಿ ಮತ್ತು ಬಡ್ತಿ ಪ್ರವರ್ಗಗಳಿಗೆ ಸಂಬಂಧಿಸಿದಂತೆ ಕೈಬಿಟ್ಟುಹೋದ ರೋಸ್ಟರ್ ಬಿಂದುಗಳನ್ನು ಪ್ರತ್ಯೇಕವಾಗಿ ಗುರುತಿಸಬೇಕು. ಸ್ಥಳೀಯ ವೃಂದಕ್ಕೆ ನೌಕರರನ್ನು ಹಂಚಿಕೆ ಮಾಡಿದ ತರುವಾಯ ಸ್ಥಳೀಯ ವೃಂದದಲ್ಲಿ ಏರ್ಪಡುವ ರೋಸ್ಟರ್ ಚಕ್ರದಲ್ಲಿ ಕೈಬಿಟ್ಟುಹೋದ ರೋಸ್ಟರ್ ಬಿಂದುಗಳನ್ನು ಕೈಬಿಟ್ಟುಹೋದ ರೋಸ್ಟರ್ ಬಿಂದುಗಳಿಗೆ ಬದಲಾಗಿ ನೀಡಲಾಗಿರುವ ರೋಸ್ಟರ್ ಬಿಂದುಗಳನ್ನು ಗುರುತಿಸುವ ಒಂದು ಮಾದರಿ ಉದಾಹರಣೆಯು ಇಲ್ಲಿ ಲಗತ್ತಿಸಲಾದ ಅನುಬಂಧದ ಪ್ರಕಾರ ಇರುತ್ತದೆ. ನೇಮಕಾತಿ/ವೃಂದ ನಿಯಂತ್ರಣ ಪ್ರಾಧಿಕಾರಗಳು, ನೇರ ನೇಮಕಾತಿ ಹುದ್ದೆಗಳಿಗೆ ಸಂಬಂಧಿಸಿದಂತೆ, ಸರ್ಕಾರಿ ಆದೇಶ ಸಂ. ಸಿಆಸುಇ 08 ಸೆಹಿಮ 95, ದಿನಾಂಕ: 20-06-1995 ಮತ್ತು ಸರ್ಕಾರಿ ಆದೇಶ ಸಂ: ಸಿಆಸುಇ 97 ಸೆನೆನಿ 2002, ದಿನಾಂಕ: 22-11-2002ರಲ್ಲಿ ಒಳಗೊಂಡಿರುವ ವಿವರಗಳಿಗೆ ಅನುಸಾರವಾಗಿ 1 ರಿಂದ ಪ್ರಾರಂಭವಾಗಿ 100ರೊಂದಿಗೆ ಮುಕ್ತಾಯಗೊಳ್ಳುವ ರೋಸ್ಟರ್‌ನ್ನು ಚಾಲನೆ ಮಾಡಿದರೆ, ಬಡ್ತಿ ಹುದ್ದೆಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂ. ಡಿಪಿಎಆರ್ 22 ಎಸ್‌ಬಿಸಿ 79, ದಿನಾಂಕ: 30.08.1979ರಲ್ಲಿ ವಿವರಿಸಿರುವ ಹಾಗೆ 1ರಿಂದ ಪ್ರಾರಂಭಿಸಿ 33ರೊಂದಿಗೆ ಮುಕ್ತಾಯಗೊಳ್ಳುವ ರೋಸ್ಟರ್‌ನ್ನು ಚಾಲನೆಗೊಳಿಸಬೇಕು. ಸ್ಥಳೀಯ ವೃಂದಕ್ಕೆ ನೌಕರರನ್ನು ಹಂಚಿಕೆ ಮಾಡಿದ ತರುವಾಯ ಪ್ರಕಟಿಸಲಾದ ರೋಸ್ಟರ್ ಬಿಂದುಗಳು ಸರ್ಕಾರಿ ಆದೇಶ ಸಂ. ಸಿಆಸುಇ 97 ಸೆನೆನಿ 2002, ದಿನಾಂಕ:22-11-2002ರಲ್ಲಿ ವಿವರಿಸಲಾದಂತೆ ಮತ್ತಷ್ಟು ಮೀಸಲಾತಿಗಳ ವಿಂಗಡಣೆಯನ್ನು ನೀಡುವ ನೇರ ನೇಮಕಾತಿ ಚಕ್ರ ಹಾಗೂ ಬಡ್ತಿ ಚಕ್ರಗಳೆರಡರ ರೋಸ್ಟರ್ ಬಿಂದುಗಳನ್ನು ಒಳಗೊಂಡಿರಲಿವೆ ಮತ್ತು ಹಾಗೆಯೇ, ಕ್ರೋಢೀಕೃತ ಕೈಬಿಟ್ಟುಹೋದ ರೋಸ್ಟರ್ ಬಿಂದುಗಳನ್ನು ನಿರ್ಧರಿಸಿದ ಸ್ಥಳೀಯ ವೃಂದಕ್ಕೆ ಮಾಡಲಾದ ಹಂಚಿಕೆಯಿಂದ ನೇರ ನೇಮಕಾತಿ ಪ್ರವರ್ಗ ಮತ್ತು ಬಡ್ತಿ ಪ್ರವರ್ಗಗಳನ್ನು ಬೇರ್ಪಡಿಸುವ ಮೂಲಕ ಎರಡೂ ಚಕ್ರಗಳಲ್ಲಿನ ಕೈಬಿಟ್ಟುಹೋದ ರೋಸ್ಟರ್ ಬಿಂದುಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಹಾಗೆ ಗಳಿಸಿದ ಕೈಬಿಟ್ಟುಹೋದ ರೋಸ್ಟರ್ ಬಿಂದುಗಳನ್ನು, ರೋಸ್ಟರನ್ನು ಸರಿದೂಗಿಸಲು ತಕ್ಷಣದ ನೇಮಕಾತಿಯಲ್ಲಿ ಭರ್ತಿ ಮಾಡಿಕೊಳ್ಳಬೇಕು. ಜೊತೆಗೆ, ಹಂಚಿಕೆ ಮಾಡಿದ ತರುವಾಯ ಸ್ಥಳೀಯ ವೃಂದದಲ್ಲಿ ಪ್ರತಿನಿಧಿತವಾದ ರೋಸ್ಟರ್ ಚಕ್ರದಲ್ಲಿ ಕಂಡುಬರದ ರೋಸ್ಟರ್ ಬಿಂದುಗಳನ್ನು, ಮುಂದೆ ರೋಸ್ಟರ್‌ನ್ನು ಚಾಲನೆಗೊಳಿಸುವಾಗ ಆಯಾಯ ರೋಸ್ಟರ್ ಬಿಂದುಗಳಿಗೆ ಪ್ರತಿಯಾಗಿ ಸರಿದೂಗಿಸಬೇಕು (setoff)/ ಹೊಂದಾಣಿಕೆ ಮಾಡಬೇಕು.

ನೇಮಕಾತಿ/ ವೃಂದ ನಿಯಂತ್ರಣ ಪ್ರಾಧಿಕಾರಗಳು, ಸ್ಥಳೀಯ ವೃಂದಕ್ಕೆ ಸೇರಲು ಇಚ್ಛಿಸುವ ನೌಕರರು ಚಲಾಯಿಸಿದ ಆಯ್ಕೆಯನ್ನು ಅವಲೋಕಿಸುವಾಗ, ಆಯಾ ವೃಂದಗಳಲ್ಲಿ ಧಾರಣಾಧಿಕಾರವನ್ನು (lien) ನಿಗದಿ ಮಾಡಲು ಸಾಧ್ಯವಾಗುವಂತೆ ಜ್ಯೇಷ್ಠತೆಯ ಆಧಾರದ ಮೇಲೆ ಆಯ್ಕೆಯನ್ನು ಅಂಗೀಕರಿಸತಕ್ಕದ್ದು. ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಳ್ಳುವ ಸ್ಥಳೀಯ ವ್ಯಕ್ತಿಗಳ ಸಂಖ್ಯೆಯು ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳ/ಖಾಲಿ ಹುದ್ದೆಗಳ ಸಂಖ್ಯೆಯನ್ನು ಮೀರಿರುವ ಸಂದರ್ಭದಲ್ಲಿ, ಹಾಗೆ ಮಾಡಿಕೊಂಡ ಆಯ್ಕೆಗಳನ್ನು, ಲಭ್ಯವಿರುವ ಹುದ್ದೆಗಳ ಸಂಖ್ಯೆಯಷ್ಟರ ಮಟ್ಟಿಗೆ ಜ್ಯೇಷ್ಠತೆಯ ಆಧಾರದ ಮೇಲೆ ಅಂಗೀಕರಿಸತಕ್ಕದ್ದು ಮತ್ತು ಇತರ ನೌಕರರಿಗೆ ಸಂಬಂಧಪಟ್ಟ ಆಯ್ಕೆಗಳನ್ನು ಸ್ಥಳೀಯ ವೃಂದವು ಭರ್ತಿಯಾಗಿದೆಯೆಂಬ ಕಾರಣಗಳ ಮೇಲೆ ತಿರಸ್ಕರಿಸತಕ್ಕದ್ದು ಅಥವಾ ಅನ್ವಯಿಸುವ ಕಡೆಗಳಲ್ಲಿ ಅದರಲ್ಲಿ ಸೂಚಿಸಿರುವ ಎರಡನೇ ಆದ್ಯತೆಯನ್ನು (ಜಿಲ್ಲೆ, ಪ್ರದೇಶ ಮತ್ತು ರಾಜ್ಯಮಟ್ಟದ ಸ್ಥಳೀಯ ವೃಂದಗಳ ಸಂದರ್ಭದಲ್ಲಿ) ಪರಿಗಣಿಸತಕ್ಕದ್ದು. ಸ್ಥಳೀಯ ವೃಂದ ಸೇರಲು ಅಥವಾ ಸೇರದಿರಲು ಒಂದು ಸಲ ಮಾಡಿಕೊಂಡ ಆಯ್ಕೆಯು ಅಂತಿಮವಾದುದಾಗಿದ್ದು ಅದನ್ನು ರದ್ದುಪಡಿಸಲಾಗುವುದಿಲ್ಲ. ನೇಮಕಾತಿ/ವೃಂದ ನಿಯಂತ್ರಣ ಪ್ರಾಧಿಕಾರಗಳು ಸೂಚಿಸಿದ ಕಾಲಮಿತಿಯೊಳಗೆ ತಮ್ಮ ಆಯ್ಕೆಗಳನ್ನು ಚಲಾಯಿಸದಿರುವ ಸ್ಥಳೀಯ ವ್ಯಕ್ತಿಗಳ ಸಂದರ್ಭದಲ್ಲಿ, ಆ ಸ್ಥಳೀಯ ವ್ಯಕ್ತಿಗೆ ಸ್ಥಳೀಯ ವೃಂದಕ್ಕೆ ಸೇರಿಕೊಳ್ಳಲು ಆಸಕ್ತಿಯಿಲ್ಲವೆಂದು ಭಾವಿಸಲಾಗುವುದು. ಹೀಗಾಗಿ ಅವರನ್ನು ಉಳಿಕೆ ಮೂಲವೃಂದಕ್ಕೆ ಹಂಚಿಕೆ ಮಾಡಲಾಗುವುದು.

ಮೀಸಲು ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ, ಅರ್ಹತೆ ಆಧಾರದ ಮೇಲೆ ಸಾಮಾನ್ಯ ಪ್ರವರ್ಗದ ಅಡಿಯಲ್ಲಿ ಆಯ್ಕೆಯಾದ ನಂತರ, ಅವರು ಮೀಸಲಾತಿಯಿಲ್ಲದ (ಸಾಮಾನ್ಯ ಅರ್ಹತೆ) ರೋಸ್ಟರ್ ಬಿಂದುವಿನಲ್ಲಿ ಮುಂದುವರೆಯುವರು ಮತ್ತು ಅವರು ಮುಂದಿನ ಉನ್ನತ ಹುದ್ದೆಗೆ ಮುಂಬಡ್ತಿ ಪಡೆಯುವ ಸಂದರ್ಭದಲ್ಲಿ, ಅವರಿಗೆ ಅನ್ವಯಿಸುವ ಮೀಸಲಿರುವ ರೋಸ್ಟರ್ ಬಿಂದುವಿಗೆ ಸಂಬಂಧಿಸಿದಂತೆ ಅವರನ್ನು ಪರಿಗಣಿಸಲಾಗುವುದು.

ನೇಮಕಾತಿ/ ವೃಂದ ನಿಯಂತ್ರಣ ಪ್ರಾಧಿಕಾರಗಳು, ಕೈಬಿಟ್ಟುಹೋದ ಅವೇ ರೋಸ್ಟರ್ ಬಿಂದುಗಳ ಅಡಿಯಲ್ಲಿ ಬರುವ ಅಂಥ ಸ್ಥಳೀಯ ವ್ಯಕ್ತಿಗಳನ್ನು ಖಾಲಿ ಹುದ್ದೆಗಳಿಗೆ ಕೂಡಲೆ ಭರ್ತಿ ಮಾಡುವ ಪ್ರಕ್ರಿಯೆಯಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳು ಭರ್ತಿಯಾಗುವಂತೆ ನೋಡಿಕೊಳ್ಳತಕ್ಕದ್ದು. ಸ್ಥಳೀಯ ವೃಂದದೊಳಗೆ ಆಯಾ/ಪ್ರವರ್ಗಗಳ ಅಡಿಯಲ್ಲಿನ ಮೂಲ ಪೋಷಣ ವೃಂದಗಳಲ್ಲಿ (feeding cadres) ಅರ್ಹ ವ್ಯಕ್ತಿಗಳು ಲಭ್ಯವಿಲ್ಲದ ಸಂದರ್ಭದಲ್ಲಿ, ಅಂಥ ಭರ್ತಿಯಾಗದಿರುವ ಖಾಲಿ ಹುದ್ದೆಗಳನ್ನು ಮುಂದಿನ ನೇಮಕಾತಿಯವರೆಗೆ ಬ್ಯಾಕ್‌ಲಾಗ್ ಹುದ್ದೆಗಳನ್ನಾಗಿ ಮುಂದುವರೆಸಬೇಕು, ಅದಾದನಂತರ ಅವುಗಳನ್ನು ಮೀಸಲಿಲ್ಲದ ಹುದ್ದೆಗಳೆಂದು ಪರಿಗಣಿಸಲಾಗುತ್ತದೆ ಮತ್ತು ತದನುಸಾರವಾಗಿ, ಸ್ಥಳೀಯ ವೃಂದದ ಪೈಕಿಯಿಂದಲೇ ಉಳಿಕೆ ಮೂಲ ವೃಂದದಿಂದ ಭರ್ತಿ ಮಾಡಲಾಗುತ್ತದೆ. ಕೈಬಿಟ್ಟುಹೋದ ರೋಸ್ಟರ್ ಬಿಂದುಗಳನ್ನು ಭರ್ತಿ ಮಾಡಿದ ತರುವಾಯ, ಸ್ಥಳೀಯ ವೃಂದದಲ್ಲಿನ ಹಾಗೂ ಉಳಿಕೆ ಮೂಲ ವೃಂದದಲ್ಲಿನ ರೋಸ್ಟರನ್ನು ಸರಿದೂಗಿಸಲಾಗುವುದು ಮತ್ತು ನೇಮಕಾತಿ/ ವೃಂದ ನಿಯಂತ್ರಣ ಪ್ರಾಧಿಕಾರಗಳು, ರೋಸ್ಟರ್ ಚಕ್ರದಲ್ಲಿ ತೋರಿಸಿರುವಂತೆ ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಲಾದ ಕೊನೆಯ ವ್ಯಕ್ತಿಯ ಕೊನೆಯ ರೋಸ್ಟರ್ ಬಿಂದುವಿನ ಕೆಳಗೆ ಬರುವಂತೆ ಕೂಡಲೇ ಮುಂದಿನ ಬಿಂದುವಿನಿಂದ ರೋಸ್ಟರನ್ನು ಚಾಲನೆಗೊಳಿಸತಕ್ಕದ್ದು. ನೇಮಕಾತಿ/ ವೃಂದ ನಿಯಂತ್ರಣ ಪ್ರಾಧಿಕಾರಗಳು ಲಂಬ (ವರ್ಟಿಕಲ್) ಮತ್ತು ಸಮಾನಾಂತರ (ಹಾರಿಜಾಂಟಲ್) ಮೀಸಲಾತಿಗಳ ಅಡಿಯಲ್ಲಿನ ಹುದ್ದೆಗಳ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು (ಸೇವಾ ನಿಯಮಗಳು) ಹೊರಡಿಸಿರುವ ಸರ್ಕಾರಿ ಆದೇಶಗಳಲ್ಲಿ ಒಳಗೊಂಡಿರುವ ಸೂಚನೆಗಳನ್ನು ಅನುಸರಿಸತಕ್ಕದ್ದು.

ನೇಮಕಾತಿ ಪ್ರಾಧಿಕಾರಗಳು, ಸ್ಥಳೀಯ ವ್ಯಕ್ತಿಗಳು ಮಾಡಿಕೊಂಡ ಆಯ್ಕೆಗಳ ಆಧಾರದ ಮೇಲೆ ಅವರನ್ನು ಸ್ಥಳೀಯ ಅಥವಾ ಉಳಿಕೆ ಮೂಲ ವೃಂದಗಳಿಗೆ ಹಂಚಿಕೆ ಮಾಡುವಾಗ ಈ ಮೇಲೆ ಹೇಳಿರುವ ಸೂಚನೆಯನ್ನು ಪಾಲಿಸತಕ್ಕದ್ದು, ಮುಂದಿನ ತಕ್ಷಣದ ನೇಮಕಾತಿಯಲ್ಲಿ ರೋಸ್ಟರ್‌ನ್ನು ಸರಿದೂಗಿಸಲು ಕ್ರಮ ಕೈಗೊಳ್ಳತಕ್ಕದ್ದು ಮತ್ತು ಅದರ ಆಧಾರದ ಮೇಲೆ, ಅನ್ವಯವಾಗುವ ನಿಗದಿತ ರೋಸ್ಟರ್ ಚಕ್ರವನ್ನು ನಿರಂತರವಾಗಿ ಚಾಲನೆಗೊಳಿಸತಕ್ಕದ್ದು.

ಕೆ.ಎಲ್.ಲೋಕನಾಥ
ಸರ್ಕಾರದ ಜಂಟಿ ಕಾರ್ಯದರ್ಶಿ,
(ಹೈದರಾಬಾದ್-ಕರ್ನಾಟಕ ವಿಶೇಷ ಕೋಶ) ಸಿ.ಆ.ಸುಇ

ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಡಿಪಿಎಆರ್ 33 ಹೆಚ್‌ಕೆಪಿ 2014, ದಿನಾಂಕ: 04.04.2014ಕ್ಕೆ ಅನುಬಂಧ

1)	ಸೇವೆಯ ಹೆಸರು	:	ಸಚಿವಾಲಯ ಸೇವೆ
2)	ಹುದ್ದೆಯ ಪದನಾಮ	:	ಬೆರಳಚ್ಚುಗಾರ
3)	ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ವೃಂದದಲ್ಲಿನ ಒಟ್ಟು ಸಂಖ್ಯೆ:	:	243.
4)	ಅನುಚ್ಛೇದ 371 (ಜೆ)ಯ ಅಡಿಯಲ್ಲಿ ಶೇ.8ರ ಪ್ರಮಾಣದಲ್ಲಿ ಉದ್ದೇಶಿಸಲಾದ ರಾಜ್ಯಮಟ್ಟದ ಮೀಸಲಾತಿ	:	19
5)	ಹುದ್ದೆಗಳನ್ನು ಭರ್ತಿ ಮಾಡುವ ವಿಧಾನ	:	ಎ. ನೇರನೇಮಕಾತಿ ಮೂಲಕ ಶೇ.90ರಷ್ಟು ಬಿ, ಬಡ್ತಿಯ ಮೂಲಕ ಶೇ. 10ರಷ್ಟು
6)	ಮೂಲ ಪೋಷಣ ವೃಂದ	:	ದಲಾಯತರುಗಳ ವೃಂದದಿಂದ ಅರ್ಹತಾ ಮಾನದಂಡವನ್ನು ಪೂರೈಸುವ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು.
7)	ಸ್ಥಳೀಯ ವೃಂದಕ್ಕೆ ಸೇರಲು ಆಯ್ಕೆ ಮಾಡಿಕೊಂಡಿರುವ ನೌಕರರ ಪೈಕಿ ಅರ್ಹ ಅಭ್ಯರ್ಥಿಗಳ ಸಂಖ್ಯೆ:	:	ಎ. ಬಡ್ತಿ-ಇಲ್ಲ ಬಿ. ನೇರನೇಮಕಾತಿ-15 ಸಿ. ಒಟ್ಟು-15
8)	ಹಂಚಿಕೆಯ ತರುವಾಯ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಸ್ಪಷ್ಟ ಖಾಲಿ ಹುದ್ದೆಗಳು	:	ಎ. ಬಡ್ತಿ-2 ಹುದ್ದೆಗಳು ಬಿ. ನೇರನೇಮಕಾತಿ-2 ಹುದ್ದೆಗಳು ಸಿ. ಒಟ್ಟು-4 ಹುದ್ದೆಗಳು

ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ವೃಂದದಲ್ಲಿನ ಒಟ್ಟು ಸಂಖ್ಯೆ	ಸಂವಿಧಾನದ ಅನುಚ್ಛೇದ 37(ಜೆ) ಪ್ರಕಾರ ಶೇ. 8ರ ಪ್ರಮಾಣದಲ್ಲಿ ಸ್ಥಳೀಯ ವ್ಯಕ್ತಿಗಳಿಗಾಗಿ ಮೀಸಲಿಟ್ಟಿರುವ ಹುದ್ದೆಗಳು			ಉಳಿಕೆ ಮೂಲ ವೃಂದದಲ್ಲಿ ಕೈಬಿಟ್ಟುಹೋಗಿರುವ ಮೀಸಲಾತಿ ಹುದ್ದೆಗಳನ್ನು ಸೃಜಿಸಿದ ನಂತರ ವೃಂದದಲ್ಲಿನ ಒಟ್ಟು ಸಂಖ್ಯೆ			ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಂಡ ಉದ್ಯೋಗಿಗಳ ಸಂಖ್ಯೆ			ಆಯ್ಕೆಯನ್ನು ಅಂಗೀಕರಿಸಿದ/ತಿರಸ್ಕರಿಸಿದ ನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಸ್ಪಷ್ಟ ಖಾಲಿ ಹುದ್ದೆಗಳು			ರೋಸ್ಟರ್ ಪ್ರವರ್ಗವನ್ನು ಸೂಚಿಸಿ ಜೇಷ್ಠತೆಯ ಕ್ರಮದಲ್ಲಿ ಸ್ಥಳೀಯ ವೃಂದಕ್ಕೆ ಹಂಚಿಕೆಯಾದ ಉದ್ಯೋಗಿಗಳ ವಿವರಗಳು	ರೋಸ್ಟರ್ ಚಕ್ರದ ಪ್ರಕಾರ ರೋಸ್ಟರ್ ಬಿಂದುಗಳು		ಸ್ಥಳೀಯ ವೃಂದಕ್ಕೆ ಉದ್ಯೋಗಿಗಳನ್ನು ಹಂಚಿಕೆ ಮಾಡಿದ ತರುವಾಯ ಪ್ರತಿನಿಧಿತವಾಗುವ ರೋಸ್ಟರ್ ಬಿಂದುಗಳು		ರೋಸ್ಟರನ್ನು ಸರಿದೂಗಿಸಲು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಾಗ ಪರಿಗಣಿಸ ಬೇಕಾಗಿರುವ ಕೈತಪ್ಪಿಹೋಗಿರುವ ರೋಸ್ಟರ್ ಬಿಂದುಗಳು	ರೋಸ್ಟರ್ ಚಕ್ರದಲ್ಲಿ ಕೈತಪ್ಪಿಹೋದ ಬಿಂದುಗಳಿಗೆ ಬದಲಾಗಿ ರೋಸ್ಟರ್ ಬಿಂದುಗಳು
	ಬಡ್ತಿ	ನೇ.ನೇ	ಒಟ್ಟು	ಬಡ್ತಿ	ನೇ.ನೇ	ಒಟ್ಟು	ಬಡ್ತಿ	ನೇ. ನೇ	ಒಟ್ಟು	ಬಡ್ತಿ	ನೇ. ನೇ	ಒಟ್ಟು	ಶ್ರೀ/ಶ್ರೀಮತಿ	ಬಡ್ತಿ (1–33)	ನೇ.ನೇ (1–100)	ಬಡ್ತಿ	ನೇ. ನೇ		
1	**2**	**3**	**4**	**5**	**6**	**7**	**8**	**9**	**10**	**11**	**12**	**13**	**14**	**15**	**16**	**17**	**18**	**19**	**20**
243	**02**	**17**	**19**	**22**	**202**	**224**	**–**	**15**	**15**	**02**	**02**	**04**							
													ಶ್ರೀಕಾಂತ್ (ನೇ.ನೇ) (05)(ಎಸ್‌ಸಿ)	1 (ಎಸ್‌ಸಿ) 2(ಎಸ್‌ಟಿ)	1 (ಎಸ್‌ಸಿ)	—	ಎಸ್‌ಸಿ	—	—
													ಜಗದೀಶ್(ನೇ.ನೇ) (13)(ಸಾ)	3(ಮೀ.ರ)	2(ಸಾ)	–	ಸಾ	—	—
													ಸುನಿಲ್ ಕುಮಾರ್ (ನೇ.ನೇ)(24)(ಸಾ)	4(ಮೀ.ರ)	3(ಎಸ್‌ಟಿ)	–	ಸಾ	ಎಸ್‌ಟಿ	ಸಾ
													ಪದ್ಮಶ್ರೀ (ನೇ.ನೇ)(13)(ಸಾ)		4(ಸಾ)	–	ಸಾ	—	—
													ಅಣ್ಣಪ್ಪ (ನೇ.ನೇ)(34)(ಸಾ/ವಿ.ಚೇ)	5(ಮೀ.ರ)	5(I)	–	ಸಾ(ವಿ.ಚೇ)	I	ಸಾ(ವಿ.ಚೇ)
													ಲಕ್ಷ್ಮಿ ಪತ್ತಾರ್ (ನೇ.ನೇ)(13)(ಸಾ)*	6(ಮಿ.ರ)	6 (ಸಾ)	–	ಸಾ	—	—
													ರೂಪ ಡಿ.ರಾವ್ (ನೇ.ನೇ)(31)(ಸಾ)*	7(ಎಸ್‌ಸಿ)	7(2ಎ)	—	ಸಾ	**2ಎ**	**ಸಾ**

ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ವೃಂದದಲ್ಲಿನ ಒಟ್ಟು ಸಂಖ್ಯೆ	ಸಂವಿಧಾನದ ಅನುಚ್ಛೇದ 37(ಜೆ) ಪ್ರಕಾರ ಶೇ. 8ರ ಪ್ರಮಾಣದಲ್ಲಿ ಸ್ಥಳೀಯ ವ್ಯಕ್ತಿಗಳಿಗಾಗಿ ಮೀಸಲಿಟ್ಟಿರುವ ಹುದ್ದೆಗಳು			ಉಳಿಕೆ ಮೂಲ ವೃಂದದಲ್ಲಿ ಕೈಬಿಟ್ಟುಹೋಗಿರುವ ಮೀಸಲಾತಿ ಹುದ್ದೆಗಳನ್ನು ಸೃಜಿಸಿದ ನಂತರ ವೃಂದದಲ್ಲಿನ ಒಟ್ಟು ಸಂಖ್ಯೆ			ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಂಡ ಉದ್ಯೋಗಿಗಳ ಸಂಖ್ಯೆ			ಆಯ್ಕೆಯನ್ನು ಅಂಗೀಕರಿಸಿದ/ತಿರಸ್ಕರಿಸಿದ ನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಸ್ಪಷ್ಟ ಖಾಲಿ ಹುದ್ದೆಗಳು			ರೋಸ್ಟರ್ ಪ್ರವರ್ಗವನ್ನು ಸೂಚಿಸಿ ಜೇಷ್ಠತೆಯ ಕ್ರಮದಲ್ಲಿ ಸ್ಥಳೀಯ ವೃಂದಕ್ಕೆ ಹಂಚಿಕೆಯಾದ ಉದ್ಯೋಗಿಗಳ ವಿವರಗಳು	ರೋಸ್ಟರ್ ಚಕ್ರದ ಪ್ರಕಾರ ರೋಸ್ಟರ್ ಬಿಂದುಗಳು		ಸ್ಥಳೀಯ ವೃಂದಕ್ಕೆ ಉದ್ಯೋಗಿಗಳನ್ನು ಹಂಚಿಕೆ ಮಾಡಿದ ತರುವಾಯ ಪ್ರತಿನಿಧಿತವಾಗುವ ರೋಸ್ಟರ್ ಬಿಂದುಗಳು		ರೋಸ್ಟರನ್ನು ಸರಿದೂಗಿಸಲು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಾಗ ಪರಿಗಣಿಸ ಬೇಕಾಗಿರುವ ಕೈತಪ್ಪಿಹೋಗಿರುವ ರೋಸ್ಟರ್ ಬಿಂದುಗಳು	ರೋಸ್ಟರ್ ಚಕ್ರದಲ್ಲಿ ಕೈತಪ್ಪಿಹೋದ ಬಿಂದುಗಳಿಗೆ ಬದಲಾಗಿ ರೋಸ್ಟರ್ ಬಿಂದುಗಳು
	ಬಡ್ತಿ	ನೇ.ನೇ	ಒಟ್ಟು	ಬಡ್ತಿ	ನೇ.ನೇ	ಒಟ್ಟು	ಬಡ್ತಿ	ನೇ. ನೇ	ಒಟ್ಟು	ಬಡ್ತಿ	ನೇ. ನೇ	ಒಟ್ಟು	ಶ್ರೀ/ಶ್ರೀಮತಿ	ಬಡ್ತಿ (1–33)	ನೇ.ನೇ (1–100)	ಬಡ್ತಿ	ನೇ. ನೇ		
1	2	3	4	5	6	7	8	9	10	11	12	13	14	15	16	17	18	19	20
													ಮಂಜುನಾಥ್(ನೇ.ನೇ) (74)(ಸಾ/ಗ್ರಾ)*	8(ಮೀ.ರ)	8(ಸಾ)	–	ಸಾ(ಗ್ರಾ)	–	–
													ಬಸವಂತರಾಯ (ನೇ.ನೇ)(86)(ಸಾ/ಗ್ರಾ)*	9(ಮೀ.ರ)	9(ಎಸ್‌ಸಿ)	–	ಸಾ	ಎಸ್‌ಸಿ	ಸಾ
													ಸಿದ್ದಣ್ಣ ನಾಟಿಕರ್ (ನೇ.ನೇ)(110)(ಸಾ/ಗ್ರಾ)*	10(ಮೀ.ರ)	10(ಸಾ)	–	ಸಾ(ಗ್ರಾ)	–	–
													ರಾಜ ಅಹಮದ್ (ನೇ.ನೇ)(114)(2ಬಿ/ಗ್ರಾ)*	11(ಮೀ.ರ)	11(2ಬಿ)	–	2ಬಿ (ಗ್ರಾ)	–	–
													ಮೊಹಮ್ಮದ್ ಪಾಷ (ನೇ.ನೇ)(126)(ಸಾ/ಪಿಡಿಪಿ)	12(ಮಿ.ರ)	12 (ಸಾ)	–	ಸಾ (ಪಿಡಿಪಿ)	–	–
													ಜಯ ಭೀಮಾ (ನೇ.ನೇ)(136)(ಸಾ/ಪಿಡಿಪಿ)*	13(ಮಿ.ರ)	13 (2ಎ)	–	ಸಾ (ಪಿಡಿಪಿ)	**2ಎ**	ಸಾ (ಪಿಡಿಪಿ)
													ಮೋನಿಕಾ ಪಿ.ಎಸ್ (ನೇ.ನೇ)(143)(2ಎ/ಪಿಡಿಪಿ)*	14(ಎಸ್.ಸಿ)	14 (ಸಾ)	–	2ಎ (ಪಿಡಿಪಿ)	**ಸಾ**	2ಎ (ಪಿಡಿಪಿ)

ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ವೃಂದದಲ್ಲಿನ ಒಟ್ಟು ಸಂಖ್ಯೆ	ಸಂವಿಧಾನದ ಅನುಚ್ಛೇದ 37(ಜೆ) ಪ್ರಕಾರ ಶೇ. 8ರ ಪ್ರಮಾಣದಲ್ಲಿ ಸ್ಥಳೀಯ ವ್ಯಕ್ತಿಗಳಿಗಾಗಿ ಮೀಸಲಿಟ್ಟಿರುವ ಹುದ್ದೆಗಳು			ಉಳಿಕೆ ಮೂಲ ವೃಂದದಲ್ಲಿ ಕೈಬಿಟ್ಟುಹೋಗಿರುವ ಮೀಸಲಾತಿ ಹುದ್ದೆಗಳನ್ನು ಸೃಜಿಸಿದ ನಂತರ ವೃಂದದಲ್ಲಿನ ಒಟ್ಟು ಸಂಖ್ಯೆ			ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಂಡ ಉದ್ಯೋಗಿಗಳ ಸಂಖ್ಯೆ			ಆಯ್ಕೆಯನ್ನು ಅಂಗೀಕರಿಸಿದ/ತಿರಸ್ಕರಿಸಿದ ನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಸ್ಪಷ್ಟ ಖಾಲಿ ಹುದ್ದೆಗಳು			ರೋಸ್ಟರ್ ಪ್ರವರ್ಗವನ್ನು ಸೂಚಿಸಿ ಜೇಷ್ಠತೆಯ ಕ್ರಮದಲ್ಲಿ ಸ್ಥಳೀಯ ವೃಂದಕ್ಕೆ ಹಂಚಿಕೆಯಾದ ಉದ್ಯೋಗಿಗಳ ವಿವರಗಳು	ರೋಸ್ಟರ್ ಚಕ್ರದ ಪ್ರಕಾರ ರೋಸ್ಟರ್ ಬಿಂದುಗಳು		ಸ್ಥಳೀಯ ವೃಂದಕ್ಕೆ ಉದ್ಯೋಗಿಗಳನ್ನು ಹಂಚಿಕೆ ಮಾಡಿದ ತರುವಾಯ ಪ್ರತಿನಿಧಿತವಾಗುವ ರೋಸ್ಟರ್ ಬಿಂದುಗಳು		ರೋಸ್ಟರನ್ನು ಸರಿದೂಗಿಸಲು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಾಗ ಪರಿಗಣಿಸ ಬೇಕಾಗಿರುವ ಕೈತಪ್ಪಿಹೋಗಿರುವ ರೋಸ್ಟರ್ ಬಿಂದುಗಳು	ರೋಸ್ಟರ್ ಚಕ್ರದಲ್ಲಿ ಕೈತಪ್ಪಿಹೋದ ಬಿಂದುಗಳಿಗೆ ಬದಲಾಗಿ ರೋಸ್ಟರ್ ಬಿಂದುಗಳು
	ಬಡ್ತಿ	ನೇ.ನೇ	ಒಟ್ಟು	ಬಡ್ತಿ	ನೇ.ನೇ	ಒಟ್ಟು	ಬಡ್ತಿ	ನೇ. ನೇ	ಒಟ್ಟು	ಬಡ್ತಿ	ನೇ. ನೇ	ಒಟ್ಟು	ಶ್ರೀ/ಶ್ರೀಮತಿ	ಬಡ್ತಿ (1–33)	ನೇ.ನೇ (1–100)	ಬಡ್ತಿ	ನೇ. ನೇ		
1	**2**	**3**	**4**	**5**	**6**	**7**	**8**	**9**	**10**	**11**	**12**	**13**	**14**	**15**	**16**	**17**	**18**	**19**	**20**
													ಶಿವಶರಣಪ್ಪ (ನೇ.ನೇ)(145)(3ಬಿ/ಪಿಡಿಪಿ) *	15(ಮೀ.ರ) 16(ಮೀ.ರ) 17(ಮೀ.ರ) 18(ಮೀ.ರ) 19(ಮೀ.ರ) 20(ಮೀ.ರ) 21(ಎಸ್.ಸಿ) – 27(ಎಸ್‌ಸಿ) – – – 33(ಮೀ.ರ)	15(ಎಸ್‌ಸಿ) 16(ಸಾ) 17(3ಎ) 18(ಸಾ) 19(3ಬಿ) 20(ಸಾ) – – – 100 (ಸಾ)	–	3ಬಿ (ಪಿಡಿಪಿ)	ಎಸ್‌ಸಿ	3ಬಿ (ಪಿಡಿಪಿ)
ಆದ್ಯತೆಗೆ ಅನುಸಾರವಾಗಿ ರೋಸ್ಟರ್ ಅನ್ನು ಸರಿದೂಗಿಸಲು ಸರಿಪಡಿಸಬೇಕಾಗಿರುವ ಕೈತಪ್ಪಿಹೋದ ರೋಸ್ಟರ್ ಬಿಂದುಗಳ ವಿವರಗಳು																		ಎಸ್‌ಟಿ, I ಎಸ್‌ಸಿ, 2ಎ ಎಸ್‌ಸಿ,	

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಳ್ಳುವ ತತ್‌ಕ್ಷಣದ ಪ್ರಯತ್ನದಲ್ಲಿ, ಮೇಲೆ ತೋರಿಸಲಾದಂಥ ಕೈತಪ್ಪಿಹೋದ ರೋಸ್ಟರ್ ಬಿಂದುಗಳನ್ನು ಮೊದಲಿಗೆ ರೋಸ್ಟರ್‌ನೊಂದಿಗೆ ಸರಿದೂಗಿಸುವ ಹಾಗೆ ಭರ್ತಿ ಮಾಡಬೇಕು ಮತ್ತು ಆ ತರುವಾಯ ಸಂಖ್ಯೆ 16ರ ನಂತರದ ರೋಸ್ಟರ್ ಬಿಂದುವಿನಿಂದ ಚಾಲನಗೊಳಿಸಬೇಕು ಮತ್ತು 1ರಿಂದ 15ರ ವರೆಗಿನ (ಸಾಮಾನ್ಯ, ಸಾಮಾನ್ಯ, ಸಾಮಾನ್ಯ (ಪಿಡಿಪಿ), 3ಬಿ (ಪಿಡಿಪಿ) ಹಂಚಿಕೆಯಲ್ಲಿ ಈಗಾಗಲೇ ಪ್ರತಿನಿಧಿತವಾಗಿರುವ ರೋಸ್ಟರ್ ಚಕ್ರದಲ್ಲಿ (22, 24, 26, 43) ಕೈತಪ್ಪಿಹೋದ ಬಿಂದುಗಳಿಗೆ ಬದಲಿಯಾದ ರೋಸ್ಟರ್ ಬಿಂದುಗಳನ್ನು ತರುವಾಯದ ರೋಸ್ಟರ್‌ನ್ನು ಚಾಲನೆಗೊಳಿಸುವಾಗ ಆಯಾ ರೋಸ್ಟರ್ ಬಿಂದುಗಳಿಗೆ ಸಂಬಂಧಿಸಿದಂತೆ ಸರಿದೂಗಿಸತಕ್ಕದ್ದು.		

***ಸ್ಥಳೀಯ ಅಭ್ಯರ್ಥಿ ಮಾನದಂಡವನ್ನು ಪೂರೈಸುವ 01.01.2013ರ ನಂತರ ನೇಮಕಗೊಂಡ ಅಭ್ಯರ್ಥಿಗಳು.**

ಕೆ.ಎಲ್. ಲೋಕನಾಥ
ಸರ್ಕಾರದ ಜಂಟಿ ಕಾರ್ಯದರ್ಶಿ,
(ಹೈದರಾಬಾದ್-ಕರ್ನಾಟಕ ವಿಶೇಷ ಕೋಶ) ಸಿ.ಆ.ಸು.ಇ

P.R. 431
SC- 1000

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59.